# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 71
ಸದಸ್ಯರ ಹೆಸರು : ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 12.09.2022
ಉತ್ತರಿಸುವ ಸಚಿವರು : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>01</td><td>ಸರ್ಕಾರಿ ಪ್ರೌಢಶಾಲೆಗಳಲ್ಲಿ ವಿದ್ಯುಚ್ಛಕ್ತಿ ಹಾಗೂ ನೀರು ಹಾಗೂ ಇತರೆ ಬಿಲ್ಲುಗಳಿಗೆ ಸಂಬಂಧಿಸಿದಂತೆ ಪ್ರತಿ ಶಾಲೆಗೆ ಎಷ್ಟು ಮೊತ್ತವನ್ನು ಸರ್ಕಾರದಿಂದ ಬಿಡುಗಡೆಗೊಳಿಸಲಾಗುವುದು: (ಪೂರ್ಣ ವಿವರ ನೀಡುವುದು)</td><td>
ರಾಜ್ಯ ಮುಂದುವರಿದ ಕಾರ್ಯಕ್ರಮಗಳಡಿಯಲ್ಲಿ 2022-23ನೇ ಸಾಲಿನಲ್ಲಿ ಕುಡಿಯುವ ನೀರು ಶೌಚಾಲಯಗಳ ನಿರ್ವಹಣೆಗಾಗಿ ಪ್ರತಿ ಸರ್ಕಾರಿ ಶಾಲೆಗೆ ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಮುಖ್ಯೋಪಾಧ್ಯಾಯರ/ಎಸ್.ಡಿ.ಎಂ.ಸಿ ಜಂಟಿ ಖಾತೆಗಳಿಗೆ ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ.
<table>
<tr><th>ಶಾಲೆಗಳ ವಿವರ</th><th>ಶಾಲೆಗಳ ಸಂಖ್ಯೆ</th><th>ಘಟಕ ವೆಚ್ಚ (ರೂ.ಗಳಲ್ಲಿ)</th><th>ಅನುದಾನ ಬಿಡುಗಡೆ (ರೂ.ಲಕ್ಷಗಳಲ್ಲಿ)</th></tr>
<tr><td>ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳು</td><td>20747</td><td>6350/-</td><td>1317.44</td></tr>
<tr><td>ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳು</td><td>21906</td><td>8000/-</td><td>1752.48</td></tr>
<tr><td>ಸರ್ಕಾರಿ ಪ್ರೌಢ ಶಾಲೆಗಳು</td><td>4729</td><td>9000/-</td><td>425.61</td></tr>
<tr><td>ಒಟ್ಟು</td><td>47382</td><td></td><td>3495.53</td></tr>
</table>
ಅಲ್ಲದೇ ಸಮಗ್ರ ಶಿಕ್ಷಣ-ಕರ್ನಾಟಕ ವತಿಯಿಂದ 2022-23ನೇ ಸಾಲಿನಲ್ಲಿ ಕುಡಿಯುವ ನೀರು ಶೌಚಾಲಯಗಳ ನಿರ್ವಹಣೆಗಾಗಿ ಪ್ರತಿ ಸರ್ಕಾರಿ ಶಾಲೆಗೆ ರಾಜ್ಯದ ಎಲ್ಲಾ ಸರ್ಕಾರಿ ಪ್ರೌಢ ಶಾಲೆಗಳ ಮುಖ್ಯೋಪಾಧ್ಯಾಯರ/ಎಸ್.ಡಿ.ಎಂ.ಸಿ ಜಂಟಿ ಖಾತೆಗಳಿಗೆ ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ.
<table>
<tr><th>ಶಾಲೆಗಳ ವಿವರ</th><th>ಶಾಲೆಗಳ ಸಂಖ್ಯೆ</th><th>ಘಟಕ ವೆಚ್ಚ (ರೂ.ಗಳಲ್ಲಿ)</th><th>ಪ್ರತಿ ಶಾಲೆಗೆ ಇಲ್ಲಿಯವರಗೆ ಬಿಡುಗಡೆ (ರೂ.ಗಳಲ್ಲಿ)</th><th>ಬಿಡುಗಡೆ ಮೊತ್ತ (ರೂ.ಲಕ್ಷಗಳಲ್ಲಿ)</th></tr>
<tr><td>1 ರಿಂದ 30 ವಿದ್ಯಾರ್ಥಿಗಳಿರುವ ಶಾಲೆಗಳು</td><td>50</td><td>10000/-</td><td>2500/-</td><td>1.25</td></tr>
<tr><td>31 ರಿಂದ 100 ವಿದ್ಯಾರ್ಥಿಗಳಿರುವ ಶಾಲೆಗಳು</td><td>1266</td><td>25000/-</td><td>5000/-</td><td>63.30</td></tr>
<tr><td>101 ರಿಂದ 250 ವಿದ್ಯಾರ್ಥಿಗಳಿರುವ ಶಾಲೆಗಳು</td><td>2244</td><td>50000/-</td><td>5000/-</td><td>112.20</td></tr>
</table>
</td></tr>
</table>

| | | | | | | |
|---|---|---|---|---|---|---|
| | | 251 ರಿಂದ 1000 ವಿದ್ಯಾರ್ಥಿಗಳಿರುವ ಶಾಲೆಗಳು | 1649 | 75000/- | 5000/- | 82.45 |
| | | 1000ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರುವ ಶಾಲೆಗಳು | 106 | 100000/- | 5000/- | 5.30 |
| | | ಒಟ್ಟು | **5315** | | | **264.50** |

| | | |
|---|---|---|
| 02 | ಸರ್ಕಾರ ಬಿಡುಗಡೆಗೊಳಿಸುವ ಮೊತ್ತಕ್ಕಿಂತ ಹೆಚ್ಚಿನ ಮೊತ್ತದ ಬಿಲ್ಲು (ವಿದ್ಯುತ್‌ಚ್ಛಕ್ತಿ ಹಾಗೂ ನೀರಿಗೆ ಸಂಬಂಧಿಸಿದಂತೆ) ಬಂದು, ಶಾಲೆಗಳಿಗೆ ಹೊರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ.<br>• ಸರ್ಕಾರಿ ಆದರ್ಶ ವಿದ್ಯಾಲಯ, ತಟ್ಟೇಕೆರೆ, ಹೊಳೆನರಸೀಪುರ ತಾಲ್ಲೂಕು, ಹಾಸನ ಜಿಲ್ಲೆ ಈ ಶಾಲೆಗೆ ಸಂಬಂಧಿಸಿದಂತೆ ವಿದ್ಯುತ್ ಇಲಾಖೆಗೆ ರೂ.220806.00ಗಳ ಹಿಂಬಾಕಿಯನ್ನು ಪಾವತಿಸಬೇಕಾಗಿದ್ದು. ಸದರಿ ಶಾಲಾ ಎಸ್.ಡಿ.ಎಮ್.ಸಿ ಖಾತೆಯಲ್ಲಿರುವ ಸಂಚಿತ ನಿಧಿಯ ಮೊತ್ತದಿಂದ ವಿದ್ಯುತ್ ಬಿಲ್ ಪಾವತಿಸಲು ಅನುಮತಿ ನೀಡಲಾಗಿದೆ. (ಪ್ರತಿಯನ್ನು **ಅನುಬಂಧ-1**ರಲ್ಲಿ ಲಗತ್ತಿಸಿದೆ)<br>• ಸರ್ಕಾರಿ ಆದರ್ಶ ವಿದ್ಯಾಲಯ, ಸಿರಗುಪ್ಪ, ಬಳ್ಳಾರಿ ಜಿಲ್ಲೆ ಈ ಶಾಲೆಗೆ ಸಂಬಂಧಿಸಿದಂತೆ ವಿದ್ಯುತ್ ಇಲಾಖೆಗೆ ರೂ.4,14,187 ಗಳ ಹಿಂಬಾಕಿಯನ್ನು ಪಾವತಿಸಬೇಕಾಗಿದ್ದು. ಸದರಿ ಶಾಲಾ ಆರ್.ಎಂ.ಎಸ್.ಎ ಖಾತೆಯಲ್ಲಿರುವ ಸಂಚಿತ ನಿಧಿಯ ಮೊತ್ತದಿಂದ ವಿದ್ಯುತ್ ಬಿಲ್ ಪಾವತಿಸಲು ಅನುಮತಿ ನೀಡಲಾಗಿದೆ. (ಪ್ರತಿಯನ್ನು **ಅನುಬಂಧ-2**ರಲ್ಲಿ ಲಗತ್ತಿಸಿದೆ) |
| 03 | ಹಾಗಿದ್ದಲ್ಲಿ, ಇದನ್ನು ಸರಿದೂಗಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು? | ಮೇಲ್ಕಂಡ 02 ಶಾಲೆಗಳನ್ನು ಹೊರತು ಪಡಿಸಿ, ಕುಡಿಯುವ ನೀರು ಮತ್ತು ವಿದ್ಯುತ್ ಬಿಲ್ಲುಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಮೊತ್ತದ ಬಿಲ್ಲು ಬಂದಿರುವುದು ವರದಿಯಾಗಿರುವುದಿಲ್ಲ. |

**ಇಪಿ:263 ಯೋಸಕ 2022**

(ಬಿ.ಸಿ.ನಾಗೇಶ್)
**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು**

ಅನುಬಂಧ-1

ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001.

ಯೋ2/ಆ.ವಿ/ತಟ್ಟೇಕೆರೆ/01/2021-22 ದಿನಾಂಕ: 09.02.2022

ಇವರಿಗೆ,

ಜಿಲ್ಲಾ ಉಪನಿರ್ದೇಶಕರು (ಆಡಳಿತ).

ಸಾರ್ವಜನಿಕ ಶಿಕ್ಷಣ ಇಲಾಖೆ.

ಹಾಸನ ಜಿಲ್ಲೆ.

ಮಾನ್ಯರೆ.

ವಿಷಯ: ಸರ್ಕಾರಿ ಆದರ್ಶ ವಿದ್ಯಾಲಯ, ತಟ್ಟೇಕೆರೆ. ಹೊಳೆನರಸೀಪುರ ತಾಲ್ಲೂಕು. ಹಾಸನ ಜಿಲ್ಲೆಯ ವಿದ್ಯುಚ್ಛಕ್ತಿ ಹಿಂಬಾಕಿಯನ್ನು ಪಾವತಿಸುವ ಬಗ್ಗೆ.

ಉಲ್ಲೇಖ: 1. ರಾಜ್ಯ ಯೋಜನಾ ನಿರ್ದೇಶಕರು. ಸಮಗ್ರ ಶಿಕ್ಷಣ ಇಲಾಖೆ. ಬೆಂಗಳೂರು. ಇವರ ಪತ್ರ ಸಂಖ್ಯೆ: ಸಶಿಕ/ಆವಿ/ವಿದ್ಯುತ್ & ಇತರೆ ಬಿಲ್ಲು/2021-22. ದಿನಾಂಕ: 22/10/2021

2. ಉಪನಿರ್ದೇಶಕರು(ಆಡಳಿತ). ಸಾ ಶಿ ಇ. ಹಾಸನ ಜಿಲ್ಲೆ ಇವರ ಪತ್ರ ಸಂಖ್ಯೆ:ಸ.ಶಿ ಕ/ಆ ವಿ 01/2021-22. ದಿನಾಂಕ:21.12.2021.

3. ಮುಖ್ಯ ಶಿಕ್ಷಕರು. ಆದರ್ಶ ವಿದ್ಯಾಲಯ(RMSA), ತಟ್ಟೇಕೆರೆ(ಬಾರೆ). ಹೊಳೆನರಸೀಪುರ ಇವರ ಪತ್ರ ದಿನಾಂಕ: 28/09/2021.

ಸರ್ಕಾರಿ ಆದರ್ಶ ವಿದ್ಯಾಲಯ ತಟ್ಟೇಕೆರೆ. ಹೊಳೆನರಸೀಪುರ ತಾಲ್ಲೂಕು. ಹಾಸನ ಜಿಲ್ಲೆಯ ವಿದ್ಯುತ್ ಸ್ಥಾವರದ ಆರ್ ಆರ್ ನಂ: MSEH20786 ಗೆ ಸಂಬಂಧಪಟ್ಟಂತೆ ವಿದ್ಯುತ್ ಇಲಾಖೆಗೆ ರೂ.220806=00(ರೂ. ಎರಡು ಲಕ್ಷದ ಇಪ್ಪತ್ತು ಸಾವಿರದ ಎಂಟುನೂರ ಆರು)ಗಳ ಹಿಂಬಾಕಿಯನ್ನು ಪಾವತಿಸಬೇಕಿದ್ದು. ಈ ಕಛೇರಿಯಿಂದ ಕ್ರಮ ವಹಿಸಲು ಉಲ್ಲೇಖ(1)ರ ಪತ್ರದಲ್ಲಿ ಕೋರಿರುತ್ತೀರಿ.

ಉಲ್ಲೇಖಿತ ಪತ್ರ(2)ರಲ್ಲಿ. ಆರ್ ಆರ್ ನಂ: MSEH20786ಗೆ ಸಂಬಂಧಿಸಿದಂತೆ ಮಾಪಕ ಸ್ಥಿರಾಂಕ ಕೆ=10 ಆಗಿದ್ದು ಕೆ=1 ರ ಬಿಲ್ ನೀಡಿದ್ದು ಪ್ರಸ್ತುತ ವಿದ್ಯುತ್ ಇಲಾಖೆಗೆ ರೂ.220806=00(ರೂ. ಎರಡು ಲಕ್ಷ ಇಪ್ಪತ್ತು ಸಾವಿರ ಎಂಟು ನೂರ ಆರು ಮಾತ್ರ)ಗಳನ್ನು ಹಿಂಬಾಕಿಯಾಗಿ ಪಾವತಿಸಬೇಕಾಗಿರುತ್ತದೆ. ಕೋವಿಡ್19ರ ಕಾರಣದಿಂದ ದಿನಾಂಕ:22.03.2020ರಿಂದ 01.09.2021ರವರೆಗೆ ಲಾಕ್ ಡೌನ್ ಮಾಡಿದ್ದರಿಂದ 2019-20ರಿಂದ 2021-22ನೇ ಶೈಕ್ಷಣಿಕ ವರ್ಷಗಳಲ್ಲಿ ಅಗತ್ಯವಿರುವ ಚಟುವಟಿಕೆಗಳಿಗೆ ಮಾತ್ರ ನಿಯಮಾನುಸಾರ ಹಣವನ್ನು ಖರ್ಚು ಮಾಡಿದ್ದು ಶಾಲಾ ಎಸ್.ಡಿ.ಎಂ.ಸಿ ಖಾತೆಯಲ್ಲಿ ರೂ.6,59,844=00(ರೂ. ಆರು ಲಕ್ಷ ಐವತ್ತೊಂಬತ್ತು ಸಾವಿರದ ಎಂಟು ನೂರ ನಲವತ್ತನಾಲ್ಕು ಮಾತ್ರ) ಸಂಚಿತ ನಿಧಿಯ ಮೊತ್ತವಿರುತ್ತದೆ. ಸುಮಾರು 400 ವಿದ್ಯಾರ್ಥಿಗಳು ಸದರಿ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಶಾಲಾ ಸಂಚಿತ ನಿಧಿಯಿಂದ ವಿದ್ಯುತ್ ಹಿಂಬಾಕಿಯನ್ನು ಭರಿಸಲು ಅನುಮತಿ ಕೋರಿರುವುದನ್ನು ಗಮನಿಸಲಾಗಿದೆ

ನಿಮ್ಮ ಮನವಿಯನ್ನು ಪರಿಗಣಿಸಿ ಶಾಲಾ ಸಂಚಿತ ನಿಧಿಯಿಂದ ವಿದ್ಯುತ್ ಹಿಂಬಾಕಿಯನ್ನು ನಿಯಮಾನುಸಾರ ಭರಿಸಲು ಅನುಮತಿ ನೀಡಿದ್ದು. ಅಗತ್ಯ ಕ್ರಮ ಕೈಗೊಳ್ಳುವಂತೆ ತಿಳಿಸಿದೆ. ಕೈಗೊಂಡ ಕ್ರಮದ ಕುರಿತು ಈ ಕಛೇರಿಗೆ ವರದಿ ಸಲ್ಲಿಸಲು ಸೂಚಿಸಿದೆ.

Received at
14/02/2022
B C Mohankumar (FDA)

ಡಾ.ವಿಶಾಲ್. ಆರ್., ಭಾ.ಆ.ಸೇ.
ಆಯುಕ್ತರು. ಸಾ.ಶಿ.ಇ
ಬೆಂಗಳೂರು

ಪ್ರತಿಯನ್ನು:

1. ರಾಜ್ಯ ಯೋಜನಾ ನಿರ್ದೇಶಕರು. ಸಮಗ್ರ ಶಿಕ್ಷಣ ಇಲಾಖೆ. ಬೆಂಗಳೂರು. ಇವರಿಗೆ ಮಾಹಿತಿಗಾಗಿ.
2. ಮುಖ್ಯ ಶಿಕ್ಷಕರು. ಆದರ್ಶ ವಿದ್ಯಾಲಯ(RMSA). ತಟ್ಟೇಕೆರೆ(ಬಾರೆ). ಹೊಳೆನರಸೀಪುರ. ಇವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.

ಅನುಬಂಧ-2

ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-560001

ಸಂಖ್ಯೆ: ಯೋ2/ಆವಿ/01/21-22 ದಿನಾಂಕ:30.07.2022

ರವಾನಿಸಿದೆ
ದಿನಾಂಕ 1/8/22

ಇವರಿಗೆ,
ಉಪನಿರ್ದೇಶಕರು(ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ
ಬಳ್ಳಾರಿ ಜಿಲ್ಲೆ

**ವಿಷಯ:** ಸರ್ಕಾರಿ ಆದರ್ಶ ವಿದ್ಯಾಲಯ ಸಿರಗುಪ್ಪ, ಬಳ್ಳಾರಿ ಜಿಲ್ಲೆಯ ವಿದ್ಯುತ್‌ಶಕ್ತಿಯ ಬಿಂಬಾಕಿಯನ್ನು ಪಾವತಿಸಲು ಶಾಲಾ ಆರ್.ಎಮ್.ಎಸ್.ಎ ಖಾತೆಯಲ್ಲಿನ ಹಣದಿಂದ ಪಾವತಿ ಮಾಡಲು ಅನುಮತಿ ಕೋರಿರುವ ಕುರಿತು

**ಉಲ್ಲೇಖ:** 1.ರಾಜ್ಯ ಯೋಜನಾ ನಿರ್ದೇಶಕರು ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು ಇವರ ಪತ್ರ ಸಂಖ್ಯೆ: ಸಶಿಕ/ಆವಿ/ವಿದ್ಯುತ್&ಇತರ ಬಿಲ್ಲು/2021-22 ದಿನಾಂಕ: 02.07.2022
2.ತಮ್ಮ ಪತ್ರಸಂಖ್ಯೆ: ಸ.ಶಿ.ಕ/ಬ /ಆ.ವಿ/ಸಿರಗುಪ್ಪ/ವಿ. ಬಾ.ಪಾ.ಕು. ಮಾ. ಕೋ/ಮಾನ್ಯ ರಾ.ನಿ/ಪ/02/2022-23 ದಿನಾಂಕ:23.06.2022

********

ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರಿ ಆದರ್ಶ ವಿದ್ಯಾಲಯ ಸಿರಗುಪ್ಪ, ಬಳ್ಳಾರಿ ಜಿಲ್ಲೆ ಈ ಶಾಲೆಗೆ ಸಂಬಂಧಿಸಿದಂತೆ, ಜಿಲ್.ಜೆ.ಲೆಟಂಗ ವಿಭಾಗದವರು ಶಾಲೆಯ ವಿದ್ಯುತ್ ಸ್ಥಾವರ ಸಂಖ್ಯೆ ಹೆಚ್.ಎಲ್-42677ನ್ನು ಪರಿಶೀಲಿಸಿ ಮಾಪಕದ ಸ್ಥಿರಾಂಕ-10 ಎಂದು ವರದಿ ನೀಡಿರುತ್ತಾರೆ ಹಾಗೂ ದಿನಾಂಕ: 01.04.2015 ರಿಂದ 30.10.2019ರ ವರೆಗೆ ರೂ.3,50,684/- ಮತ್ತು ಬಡ್ಡಿ ಸೇರಿಸಿ ರೂ.4,14,187/-ಗಳ ವಿದ್ಯುತ್‌ಶಕ್ತಿ ಬಿಲ್ಲನ್ನು ಪಾವತಿಸಬೇಕಾಗಿದ್ದು, ಸದರಿ ಬಿಲ್ಲನ್ನು ಶಾಲೆಯ ಆರ್.ಎಂ.ಎಸ್.ಎ ಖಾತೆಯಲ್ಲಿ ಲಭ್ಯವಿರುವ ಹಣದಲ್ಲಿ ಸಂಚಿತ ನಿಧಿಯಿಂದ ಪಾವತಿಸಲು ಅನುಮತಿ ನೀಡುವಂತೆ ಉಲ್ಲೇಖ(2)ರಲ್ಲಿ ರಾಜ್ಯ ಯೋಜನಾ ನಿರ್ದೇಶಕರು ಸಮಗ್ರ ಶಿಕ್ಷಣ ಕರ್ನಾಟಕ ಬೆಂಗಳೂರು ಇವರನ್ನು ಕೋರಿರುತ್ತೀರಿ.

ಈ ಹಿನ್ನಲೆಯಲ್ಲಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ನಿಮ್ಮ ಮನವಿಯನ್ನು ಪರಿಗಣಿಸಿ ಶಾಲಾ ಆರ್.ಎಂ.ಎಸ್.ಎ ಖಾತೆಯಲ್ಲಿರುವ ಹಣದಲ್ಲಿ ಸಂಚಿತ ನಿಧಿಯಿಂದ ವಿದ್ಯುತ್ ಬಿಂಬಾಕಿಯನ್ನು ನಿಯಮಾನುಸಾರ ಭರಿಸಲು ಅನುಮತಿ ನೀಡಿದ್ದು, ಅಗತ್ಯ ಕ್ರಮ ಕೈಗೊಳ್ಳುವಂತೆ ತಿಳಿಸಿದೆ. ಕೈಗೊಂಡ ಕ್ರಮದ ಕುರಿತು ಈ ಕಛೇರಿಗೆ ವರದಿ ಸಲ್ಲಿಸಲು ಸೂಚಿಸಿದೆ.

ಡಾ. ವಿಶಾಲ್ ಆರ್ ಭಾ.ಆ.ಸೇ
ಆಯುಕ್ತರು.ಸಾ.ಶಿ.ಇ
ಬೆಂಗಳೂರು

ಪ್ರತಿಯನ್ನು:
1. ರಾಜ್ಯ ಯೋಜನಾ ನಿರ್ದೇಶಕರು ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು
2. ಸರ್ಕಾರಿ ಆದರ್ಶ ವಿದ್ಯಾಲಯ, ಸಿದ್ದಪ್ಪ ನಗರ, ಸಿರಗುಪ್ಪ ತಾಲ್ಲೂಕು, ಬಳ್ಳಾರಿ ಜಿಲ್ಲೆ.